SEPTEMBER 24, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಇಂದು, ವಿಶ್ವ ಕಡಲ ದಿನ. ಜೀವ ವೈವಿಧ್ಯದ ಆಶ್ರಯ ತಾಣವಾದ, ಕಡಲು ಮತ್ತು ಕಡಲ ಪರಿಸರವನ್ನು ಸ್ವಚ್ಛವಾಗಿರಿಸೋಣ. ಭವಿಷ್ಯದ ಪೀಳಿಗೆಗೆ ಕಡಲನ್ನು ಉಳಿಸೋಣ ಎಂದು, ಕರಾವಳಿ ಜಿಲ್ಲೆಗಳಲ್ಲಿ, ಕಡಲ ತೀರಗಳಲ್ಲಿ, ಸ್ವಚ್ಛತೆಯೇ ಸೇವೆ ಅಭಿಯಾನದ ಮೂಲಕ, ಜನ ಜಾಗೃತಿ ಮೂಡಿಸಲಾಗುತ್ತಿದೆ.

<><><>

'ನಾನಲ್ಲ; ನೀವು' ಎಂಬ ಧ್ಯೇಯದೊಂದಿಗೆ, ಇಂದು, ರಾಷ್ಟ್ರೀಯ ಸೇವಾ ಯೋಜನೆ ಸಂಸ್ಥಾಪನಾ ದಿನಾಚರಣೆ. ವಿದ್ಯಾರ್ಥಿಗಳಲ್ಲಿ, ಶಿಸ್ತು, ನಾಯಕತ್ವ ಮತ್ತು ಸಾಮಾಜಿಕ ಜವಾಬ್ದಾರಿ ಮೈಗೂಡಿಸಲು, ಎನ್.ಎಸ್.ಎಸ್. ಸಹಕಾರಿಯಾಗಿದೆ. ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವಾಲಯ, ಸಹಾನುಭೂತಿಯಿಂದ ಸೇವೆ ಸಲ್ಲಿಸುತ್ತಿರುವ, ರಾಷ್ಟ್ರೀಯ ಸೇವಾ ಯೋಜನೆಯ, ಸ್ವಯಂಸೇವಕರ ಸೇವೆಯನ್ನು ಶ್ಲಾಘಿಸಿ, ಅಭಿನಂದಿಸಿದೆ.

<><><>

ಬರ ಪರಿಹಾರ ಮತ್ತು ಕೇಂದ್ರದ ನೆರವಿನ ಕುರಿತು ಚರ್ಚಿಸಲು, ಹೊಸ ದಿಲ್ಲಿಗೆ ಸರ್ವಪಕ್ಷ ನಿಯೋಗ ಕರೆದೊಯ್ಯಲು, ನಿರ್ಧರಿಸಿದ್ದಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ತಿಳಿಸಿದ್ದಾರೆ. ಬೆಂಗಳೂರಿನ ವಿಧಾನಸೌಧದಲ್ಲಿ ಮಾತನಾಡಿದ ಅವರು, 177 ತಾಲೂಕುಗಳಲ್ಲಿ ಭೀಕರ ಬರವಿದ್ದು, ಅಧಿಕೃತವಾಗಿ ಘೋಷಿಸಲಾಗಿದೆ. 3 ಸಾವಿರದ 7 ನೂರಾ 5 ಕೋಟಿ, 30 ಲಕ್ಷ ರೂಪಾಯಿ ಮಧ್ಯಂತರ ಪರಿಹಾರ ಒದಗಿಸುವಂತೆ, ಪ್ರಧಾನಮಂತ್ರಿಯವರಿಗೆ ಪತ್ರ ಬರೆದಿದ್ದಾಗಿ, ಹೇಳಿದರು. ರಾಜ್ಯದ ೨೦೦ ತಾಲೂಕುಗಳಲ್ಲಿ, ಭೀಕರ ಬರ ಪರಿಸ್ಥಿತಿ ಇದೆ. ಬರಗಾಲದ ಕುರಿತು ವಿಸ್ತೃತ ಚರ್ಚೆ ನಡೆಸಲು, ವಿಶೇಷ ಅಧಿವೇಶನವನ್ನು ಇಂದಿಗೆ ವಿಸ್ತರಿಸಲಾಗಿದೆ, ಎಂದರು.

<><><>

ಉತ್ತರ ಕರ್ನಾಟಕ ಭಾಗದ, ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು, ೫೦ ಸಾವಿರ ಕೋಟಿ ರೂಪಾಯಿ ಅನುದಾನ ನೀಡುವಂತೆ, ವಿಧಾನಸಭೆ ವಿಪಕ್ಷ ಉಪನಾಯಕ ಅರವಿಂದ ಬೆಲ್ಲದ, ವಿಶೇಷ ಅಧಿವೇಶನದಲ್ಲಿ, ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ವಿಧಾನಸಭೆಯಲ್ಲಿ, ಬರ ಕುರಿತ ಚರ್ಚೆಯಲ್ಲಿ ಮಾತನಾಡಿದ ಅವರು, ೩೭ ಸಾವಿರ ಕೋಟಿ ರೂಪಾಯಿ ಬೆಳೆ ನಷ್ಟ ಅಂದಾಜಿಸಲಾಗಿದೆ. ಬರ ಎದುರಿಸಲು, ಸಮರ್ಪಕ ಪೂರ್ವಸಿದ್ಧತೆಗಳು ಬೇಕು ಎಂದರು.

<><><>

ಸೇವಾ ಸಂಕಲ್ಪ ಮಾಸಿಕ ಅಭಿಯಾನ, ದೇಶಾದ್ಯಂತ ಜರುಗುತ್ತಿದೆ. 2020 ರಲ್ಲಿ ಸ್ಥಾಪನೆಗೊಂಡ, IN-SPACe (Indian National Space Promotion and Authorisation Centre), ಬಾಹ್ಯಾಕಾಶ ಇಲಾಖೆ ಅಧೀನದ, ಸ್ವಾಯತ್ತ ಏಕಗವಾಕ್ಷಿ ಸಂಸ್ಥೆಯಾಗಿ, ಸೇವಾ ನಿರತವಾಗಿದೆ. ಖಾಸಗಿ ಸಂಸ್ಥೆಗಳಿಂದ, ಉಪಗ್ರಹ ಉಡಾವಣೆ ಮತ್ತು ಕಾರ್ಯಾಚರಣೆಗಳಿಗೆ ಅನುಮತಿ, ಇಸ್ರೋ ಸೌಲಭ್ಯಗಳ ಬಳಕೆ, ಬಾಹ್ಯಾಕಾಶ ಕ್ಷೇತ್ರದ ಸಂಪೂರ್ಣ ಮೌಲ್ಯ ಸರಪಳಿಯಲ್ಲಿ, ಉಪಕರಣ ಮತ್ತು ಘಟಕಗಳ ತಯಾರಿಕೆಯಿಂದ ಹಿಡಿದು ಬಾಹ್ಯಾಕಾಶ ದತ್ತಾಂಶ ಮಾರಾಟದ ವರೆಗೆ, ಖಾಸಗಿ ಚಟುವಟಿಕೆಗಳನ್ನು ಉತ್ತೇಜಿಸಿ, ನಿಯಂತ್ರಿಸುತ್ತಿದೆ. ರಾಜ್ಯದ ಶಾಲಾ ಶಿಕ್ಷಣ ಇಲಾಖೆ ಸಹ, ಪ್ರೌಢ ಶಾಲೆ ಹಂತದಲ್ಲಿ, ಬಾಹ್ಯಾಕಾಶ ವಿಜ್ಞಾನದ ಬಗ್ಗೆ ಮಕ್ಕಳಲ್ಲಿ ಆಸಕ್ತಿ ಮೂಡಿಸಿ, ಅಟಲ್ ಟಿಂಕರಿಂಗ್ ಲ್ಯಾಬ್‌ಗಳ ಮೂಲಕ, ಪ್ರಾಯೋಗಿಕ ಮಾದರಿಗಳನ್ನು ಸೃಷ್ಟಿಸಿ, ಪ್ರಯೋಗಿಸಲು ಒತ್ತು ನೀಡಿದೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು, ಕುಸಗಲ್ ಸರ್ಕಾರಿ ಪ್ರೌಢ ಶಾಲೆಯ, ವಿಜ್ಞಾನ ಸಂವಹನಕಾರ, ಸಂಜೀವಕುಮಾರ ಭೂಶೆಟ್ಟಿ.

<><><>

ಸಂಜೀವಕುಮಾರ ಭೂಶೆಟ್ಟಿ ಧ್ವನಿ ೪೦ ಸೆಕೆಂದುಗಳು

<><><>

ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ ಆಯೋಜಿಸಿದ್ದ, ರಾಷ್ಟ್ರ ಮಟ್ಟದ, ಇನಸ್ಪೈಯರ್ ಮಾನಕ ಮಾದರಿ ರಚನಾ ಸ್ಪರ್ಧೆಯಲ್ಲಿ, ಉಡುಪಿ ಜಿಲ್ಲೆ, ಕಾರ್ಕಳ ತಾಲೂಕು, ಕುಕ್ಕುಜೆಯ, ಸರ್ಕಾರಿ ಪದವಿ ಪೂರ್ವ ಕಾಲೇಜಿನ, ಪ್ರೌಢ ಶಾಲಾ ವಿಭಾಗದ ವಿದ್ಯಾರ್ಥಿ, ಆದಪ್ಪ ನಿರ್ಮಿಸಿದ, 'ದಪ್ಪ ಸೌದೆ ಒಡೆಯುವ ಯಂತ್ರ' ರಾಷ್ಟ್ರ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದೆ. ಇನ್‌ಸ್ಪೈಯರ್ ಮಾನಕ ರಾಷ್ಟ್ರೀಯ ಸ್ಪರ್ಧೆಗೆ, ಕುಕ್ಕುಜೆಯ ಸರ್ಕಾರಿ ಶಾಲೆ, ಎರಡನೇ ಬಾರಿಗೆ ಆಯ್ಕೆಯಾಗಿರುವುದು, ವಿಶೇಷ.

<><><>

ರಾಜ್ಯದ ಹಿರಿಯ ಮನೋವೈದ್ಯರು, ಪ್ರೇರಣಾದಾಯಿ ವಾಗ್ಮಿಗಳು ಮತ್ತು ಅಂಕಣಕಾರರಾಗಿದ್ದ, ಧಾರವಾಡದ ಡಾಕ್ಟರ್ ಆನಂದ ಪಾಂಡುರಂಗಿ ಇಂದು ಬೆಳಗ್ಗೆ ನಿಧನರಾಗಿದ್ದಾರೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಂತಾಪ ಸೂಚಿಸಿ, ಡಾಕ್ಟರ್ ಆನಂದ ಪಾಂಡುರಂಗಿಯವರು, ಸಮಾಜಮುಖಿ ವೈದ್ಯ ಸಾಹಿತಿ. ಸಂಘ ಪರಿವಾರದ ಜೊತೆಗೂ ಸಂಬಂಧ ಹೊಂದಿದವರು. ರಾಜ್ಯೋತ್ಸವ ಪ್ರಶಸ್ತಿ, ಡಾಕ್ಟರ್ ಬಿ.ಸಿ. ರಾಯ್ ಪ್ರಶಸ್ತಿ ಸೇರಿದಂತೆ, ಹಲವು ಗೌರವಗಳಿಗೆ ಭಾಜನರಾಗಿದ್ದ ಅವರ ಅಗಲಿಕೆ, ವೈದ್ಯಕೀಯ ಕ್ಷೇತ್ರ ಹಾಗೂ ಸಮಾಜಕ್ಕೆ ತುಂಬಿಬಾರದ ನಷ್ಟವಾಗಿದೆ ಎಂದು, ಕಂಬನಿ ಮಿಡಿದಿದ್ದಾರೆ. ಶಾಸಕ ಮಹೇಶ ಟೆಂಗಿನಕಾಯಿ ಸೇರಿದಂತೆ, ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ.

<><><>

ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ ಹಾಗೂ ತುಮಕೂರು ಜಿಲ್ಲೆಗಳ, 74 ಲಕ್ಷ 26 ಸಾವಿರ ರೈತರಿಗೆ ಹಾಗೂ 5 ಲಕ್ಷ 57 ಸಾವಿರ ಎಕರೆ ಕೃಷಿ ಭೂಮಿಗೆ ನೀರೊದಗಿಸುವ, ಭದ್ರಾ ಯೋಜನೆ ಮತ್ತು ಚಿತ್ರದುರ್ಗದ ಗೋನುರು ಕೆರೆ ತುಂಬಿಸಿದ ಸಂದರ್ಭದಲ್ಲಿ, ಇಂದು, ಶ್ರೀ ಮಾದಾರ ಚನ್ನಯ್ಯ ಗುರುಪೀಠದ ಪಕ್ಕದ ಮೈದಾನದಲ್ಲಿ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರಿಗೆ, ರೈತರಿಂದ ಅಭಿನಂದನಾ ಸಮಾರಂಭ, ನಡೆಯಲಿದೆ.

<><><>

ರಾಯಚೂರು ರೇಲ್ವೆ ನಿಲ್ದಾಣದಲ್ಲಿ, ದಕ್ಷಿಣ ಮಧ್ಯ ರೇಲ್ವೆಯ, ಹಿರಿಯ ಅಧಿಕಾರಿಗಳಾದ, ಆಂಜನೇಯಲು ರೆಡ್ಡಿ ಹಾಗೂ ವರುಣ್‌ಬಾಬು, ಭೇಟಿ ನೀಡಿ, ಪರಿಶೀಲಿಸಿದರು. ಬಳಿಕ, ಸಿಬ್ಬಂದಿ ಸಮಸ್ಯೆಗಳನ್ನು ಆಲಿಸಿದರು.

<><><>

ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪ್ರಾಂಗಣದಲ್ಲಿ, ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿಷೇಧ, ಜನ ಜಾಗೃತಿ ಜಾಥಾ ಜರುಗಿತು. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ, ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆ 1986 ಹಾಗೂ ತಿದ್ದುಪಡಿ ಕಾಯ್ದೆ 2016ರ ಕುರಿತು ವರ್ತಕರಲ್ಲಿ ಜಾಗೃತಿ ಮೂಡಿಸಲಾಯಿತು.

<><><>

ಖ್ಯಾತ ಪ್ರಾಧ್ಯಾಪಕ, ಪ್ರೊಫೆಸರ್ ಶ್ರೀನಿವಾಸ ತೋಘಖಾನೆ ಅವರ, ಶತಮಾನದ ನೆನಪು ನಮನ ಕಾರ್ಯಕ್ರಮ, ಹುಬ್ಬಳ್ಳಿಯ ಸಾಹಿತ್ಯ ಪ್ರಕಾಶನ ವತಿಯಿಂದ, ನಾಡಿದ್ದು ಸಂಜೆ ೫.೩೦ಕ್ಕೆ ಸವಾಯಿ ಗಂಧರ್ವ ಭವನದಲ್ಲಿ, ಆಯೋಜಿಸಲಾಗಿದೆ ಎಂದು, ಸಾಹಿತ್ಯ ಪ್ರಕಾಶನದ, ಎಂ.ಎ. ಸುಬ್ರಹ್ಮಣ್ಯ ತಿಳಿಸಿದ್ದಾರೆ. ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.